ಇ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

ಅ) ಇಲ್ಲ.

ಆ) ನಿಜವಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ:- ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಆಹಾರದಲ್ಲಿ ಕಲಬೆರಿಕೆ

1069 (809) **ಶ್ರೀ. ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆಯು ಕಳೆದ ಐದು ವರ್ಷಗಳಲ್ಲಿ ನಗರದಲ್ಲಿ ಆಹಾರ ಕಲಬೆರಕೆಯ ಎಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದೆ?

ಆ) ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಶಿಕ್ಷೆ ವಿಧಿಸಲಾಗಿದೆ?

ಇ) ಚಾಲ್ತಿಯಲ್ಲಿರುವ ಪ್ರಕರಣಗಳು ಎಷ್ಟು? (ಆರೋಪಿಗಳ ಹೆಸರುಗಳೊಂದಿಗೆ ಪ್ರತಿ ವರ್ಷದ ವಿವರವನ್ನು ಒದಗಿಸುವುದು)

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) 9 ಪ್ರಕರಣಗಳು.

ಆ) ಒಂದು ಪ್ರಕರಣದಲ್ಲಿ ಆರೋಪಿಗೆ ಶಿಕ್ಷೆ ವಿಧಿಸಲಾಗಿದೆ.

ಇ) 6 ಪ್ರಕರಣಗಳು ಚಾಲ್ತಿಯಲ್ಲಿವೆ (ವಿವರಗಳನ್ನು ಈ ಕೆಳಗೆ ವಿವರಿಸಿದೆ).

1) ಶ್ರೀ ಎಂ.ಎಂ. ದಿದಗಾರ ಡೇರಿ ಸುಪರ್‌ವಾಯಿಜರ್, ಕೆ.ಎಂ.ಎಫ್, ಶ್ರೀ ಕೆ.ಜೆ. ರುದ್ರೇಶಪ್ಪಾ ಡೈರೆಕ್ಟರ್ ಆಫ್ ಕೆ.ಎಂ.ಎಫ್ ಹುಬ್ಬಳ್ಳಿ - ಸಿ.ಸಿ.ನಂ.593:90.
2) ಶ್ರೀ ಕಲ್ಲಯ್ಯ ಗೂಳಯ್ಯ ಕಲ್ಲಯ್ಯನವರ - ಸಿ.ಸಿ.ನಂ. 412-95
3) ಶ್ರೀ ಶಿವಪ್ಪಾ ಕಣ್ಣನಗೌಡಾ ಇಂಚಲ - ಸಿ.ಸಿ.ನಂ. 969-95
4) ಶ್ರೀ ವಿಠ್ಠಲ ನಂಜಪ್ಪ ಶೆಟ್ಟಿ - ಸಿ.ಸಿ.ನಂ. 969-95
5) ಶ್ರೀ ನಾಗಪ್ಪ ಮಲ್ಲಪ್ಪ ಪವಾಡಶೆಟ್ಟಿ - ಸಿ.ಸಿ.ನಂ. 7:96
6) ಶ್ರೀ ಆರ್.ಪಿ. ಕಾಮತ್ - ಸಿ.ಸಿ.ನಂ. 1634:96

ವಿಷಯ:- ರಾಜ್ಯದಲ್ಲಿರುವ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳು.

1070 (1759) **ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):-** ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ದೊಡ್ಡ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳೆಷ್ಟು?

ಆ) ಇವುಗಳಲ್ಲಿ ಪ್ರತಿ ವರ್ಗದಲ್ಲಿ ಎಷ್ಟು ಮೌಲ್ಯದ ಉತ್ಪಾದನೆ ಮಾಡಲಾಗುತ್ತಿದೆ?

ಇ) ಇವುಗಳಲ್ಲಿ ಅಸ್ವಸ್ಥ ಕೈಗಾರಿಕೆಗಳು ಎಷ್ಟು? ಅದಕ್ಕೆ ಕಾರಣಗಳೇನು?

ಈ) ಇವುಗಳ ಅಭಿವೃದ್ಧಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಉ) ಮೇಲಿನ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) 794.

ಆ) ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) 120.

ಕಾರಣಗಳು

1) ಅಸಮರ್ಪಕ ಕಚ್ಚಾ ಮಾಲು ಪೂರೈಕೆ.

2) ದುಡಿಮೆ ಬಂಡವಾಳ ಕಾಲಾನುಕಾಲಕ್ಕೆ ಒದಗಿಸಿಕೊಂಡು ಘಟಕವನ್ನು ನಡೆಸದೇ ಇರುವುದು.

3) ಕಾರ್ಮಿಕರ ಸಮಸ್ಯೆಗಳು.

4) ವಿದ್ಯುಚ್ಛಕ್ತಿಯ ಅಸಮರ್ಪಕ ಪೂರೈಕೆ.

5) ಮಾರುಕಟ್ಟೆಯಲ್ಲಿ ಬೆಲೆಗಳ ಏರುಪೇರು.

6) ಸಿದ್ಧ ವಸ್ತುಗಳಿಗೆ ಮಾರುಕಟ್ಟೆ ಸಮಸ್ಯೆ.

7) ಸ್ಪರ್ಧಾತ್ಮಕ ಮಾರುಕಟ್ಟೆ.

ಈ) ರಾಜ್ಯ ಸರ್ಕಾರವು ಪರಿಹಾರ ಮತ್ತು ರಿಯಾಯಿತಿಯ ಒಂದು ಪ್ಯಾಕೇಜನ್ನು ಅನುಸರಿಸುತ್ತಿದ್ದು, ಅದನ್ನು ಆಸ್ವಸ್ಥ ಕೈಗಾರಿಕೆಗಳಿಗೆ ನೀಡುತ್ತಿದೆ. ಅವು ಯಾವುವೆಂದರೆ:

- ಮಾರಾಟ ತೆರಿಗೆ ಬಾಕಿಯನ್ನು ಮುಂದೂಡುವುದು.
- ಅಭಿವೃದ್ಧಿ ಸಾಲದ ಬಾಕಿಯನ್ನು ಮುಂದೂಡುವುದು.
- ವಿದ್ಯುಚ್ಛಕ್ತಿ ಕಡಿತವನ್ನು ಶೇ. 50ಕ್ಕೆ ಇಳಿಸುವುದು.
- ಕಾರ್ಖಾನೆಯನ್ನು ಮುಚ್ಚಿರುವ ಅವಧಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕನಿಷ್ಠ ಡಿಮಾಂಡ್ ಚಾರ್ಜನ್ನು ಮನ್ನಾ ಮಾಡುವುದು.
- ಕಾರ್ಮಿಕರ ಜೊತೆ ಒಪ್ಪಂದ ಮಾಡಲು ಸಹಾಯ ಮಾಡುವುದು.

ಉ) ಅಂದಾಜು 15,000 ಕಾರ್ಮಿಕರು.